**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರಡಿ ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018 ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ ಇವರ ಪತ್ರ ಸಂಖ್ಯೆ:ಜಿಪಂಅ/ಗ್ರಾಪಂ/ಸಿಬ್ಬಂದಿ/ಸಿಆರ್-170/2018-19/4939, ದಿ:14-02-2019.
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಬೆಳಗಾವಿ, ಇವರ ಪತ್ರ ಹಾಗೂ ವಿಚಾರಣಾ ವರದಿ ಸಂಖ್ಯೆ:ಪ್ರಾಆಬೆ:ಜಿಪಂ:43(ಎ):ಸಿಆರ್-01:2018-19, ದಿನಾಂಕ:03.10.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವರ್ತನೆ, ಅಧಿಕಾರ ಮತ್ತು ಹಣ ದುರುಪಯೋಗಕ್ಕಾಗಿ ಕ್ರಮಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಲಾಗಿದೆ.

ಅದರಂತೆ, ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ ಜಿಲ್ಲೆ ಇವರು ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರಡಿ ಕೆಳಕಂಡ ಆರೋಪದ ಮೇಲೆ ತನಿಖೆಯನ್ನು ನಡೆಸಲು ಕೋರಿರುತ್ತಾರೆ.

- ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು,

ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳು ವಿಜಯಪುರ ತಾಲ್ಲೂಕಿನ ಚಡಚಣ ನಗರದ ಸಾರ್ವಜನಿಕ ಸ್ಥಳದಲ್ಲಿ ಇಸ್ಪೇಟ್ ಆಡುವಾಗ ಪೊಲೀಸರ ಬಲೆಗೆ ಸಿಲುಕಿ ನ್ಯಾಯಾಲಯದಲ್ಲಿ ದಂಡ ಕಟ್ಟಿ ಬಂದಿರುವ ಬಗ್ಗೆ.

ಮೇಲೆ ಓದಲಾದ ಕ್ರಮಾಂಕ (3)ರ ಪ್ರಸ್ತಾವನೆಯಲ್ಲಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಬೆಳಗಾವಿ, ಇವರು ತಮ್ಮ ವರದಿಯಲ್ಲಿ ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ಜರುಗಿಸಲಾಗಿರುತ್ತದೆ. ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳ ವಾದ ವಿವಾದಗಳನ್ನು ಆಲಿಸಿ ಅವರುಗಳು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ಮೇಲಿನ ಆರೋಪವು ಸಾಬೀತಾಗಿರುವುದರಿಂದ ಸದರಿಯವರುಗಳ ಸದಸ್ಯತ್ವವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿಯಲ್ಲಿ ರದ್ದುಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ವಿಚಾರಣಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ಸದಸ್ಯತ್ವವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿಯಲ್ಲಿ ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 67 ಗ್ರಾಪಂಅ 2020 ಬೆಂಗಳೂರು, ದಿನಾಂಕ:05.03.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಭೀಮಾಶಂಕರ ಭಾಸ್ಕರ ಮಾದರ, ಶ್ರೀ ಪ್ರಶಾಂತ ಖೇಮು ರಾಠೋಡ, ಶ್ರೀ ಪ್ರವೀಣ ಘೊಮಸಿಂಗ್ ರಾಠೋಡ ಮತ್ತು ಶ್ರೀ ದೌಲತರಾಯ ವಿಠ್ಠಲಗೌಡ ಬಿರಾದಾರ, ಸದಸ್ಯರುಗಳು, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳನ್ನು

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿಯಲ್ಲಿ ಸದಸ್ಯತ್ವ ಸ್ಥಾನದಿಂದ ತಕ್ಷಣ ಜಾರಿಗೆ ಬರುವಂತೆ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 5/3/2020
(ಬಿ. ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

05/03/2020

**ಪ್ರತಿ:**

1) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
2) ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ವಿಜಯಪುರ ಜಿಲ್ಲೆ.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ.
6) ಸಂಬಂಧಿಸಿದವರಿಗೆ ( **ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಮುಖಾಂತರ**)

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.
4) ಗಣಕ ಕೋಶ.